ಇ) ಸ್ವಂತ ಕಟ್ಟಡವಿಲ್ಲದೇ ಇರುವ ಸರಕಾರಿ ಶಾಲೆಗಳಿಗೆ ಸರ್ಕಾರಿ ನಿವೇಶನ ಲಭ್ಯತೆ ಇಲ್ಲದೇ ಇರುವುದರಿಂದ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ.

ಸ್ವಂತ ಕಟ್ಟಡವಿಲ್ಲದೇ ಇರುವ ಶಾಲೆಗಳಿಗೆ ಬಿಡಿಎ ವತಿಯಿಂದ ನಿವೇಶನವನ್ನು ಖರೀದಿಸಲು ಸರ್ಕಾರವು ಅನುದಾನ ಬಿಡುಗಡೆ ಮಾಡುತ್ತಿದೆ. ಈ ರೀತಿ ಬಿಡುಗಡೆಯಾದ ಅನುದಾನದಲ್ಲಿ ಸ.ಹಿ.ಪ್ರಾ. ಶಾಲೆ, ಮಹಾಲಕ್ಷ್ಮೀಪುರಂ ಶಾಲೆಗೆ ಸ್ವಂತ ಕಟ್ಟಡ ನಿರ್ಮಿಸಲು ಬಿಡಿಎ ವತಿಯಿಂದ ನಿವೇಶನವನ್ನು ಒದಗಿಸಿಕೊಂಡಿದ್ದು, 30 ವರ್ಷಗಳ ಅವಧಿಗೆ ಲೀಸ್ ಮಾಡಿಕೊಳ್ಳಲಾಗಿದೆ. ನಿವೇಶನ ಸಂಖ್ಯೆ: 3[1]ಎ ಆಗಿದ್ದು ಪ್ರಸ್ತುತ ನಿವೇಶನದ ಬಗ್ಗೆ ಮಂಜುನಾಥ ವಾಣಿಜ್ಯ ಸಂಸ್ಥೆಯವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ಬೇರೊಂದು ನಿವೇಶನವನ್ನು ಸದರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಒದಗಿಸಿಕೊಡುವಂತೆ ಆಯುಕ್ತರು, ಬಿಡಿಎ ರವರೊಂದಿಗೆ ವ್ಯವಹರಿಸಲಾಗುತ್ತಿದೆ. ನಗರ ಪ್ರದೇಶದಲ್ಲಿ ಅಗತ್ಯವಿರುವ ಸ್ಥಳಗಳಲ್ಲಿ ನಿವೇಶನಗಳ ಲಭ್ಯತೆ ಕಡಿಮೆ ಇರುವುದರಿಂದ ಇದಕ್ಕೆ ಕಾಲಮಿತಿ ನಿಗದಿಪಡಿಸುವುದು ಕಷ್ಟ. ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಮತ್ತು ಬಿ.ಬಿ.ಎಂ.ಪಿ. ಜೊತೆ ವ್ಯವಹರಿಸಲಾಗುತ್ತಿದೆ. ಅಗತ್ಯ ನಿವೇಶನಗಳನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಬೆಂಗಳೂರು ನಗರದ ಮದ್ಯದಂಗಡಿ ಮತ್ತು ಬಾರ್‌ಗಳ ವಿವರ

115 (366) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್):– ಮಾನ್ಯ ಅಬಕಾರಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ನಗರದಲ್ಲಿರುವ 198 ವಾರ್ಡ್‌ಗಳಲ್ಲಿರುವ ಮದ್ಯದಂಗಡಿ ಮತ್ತು ಬಾರ್‌ಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಅಧಿಕೃತ ಎಷ್ಟು? ಹಾಗೂ ಅನಧಿಕೃತ ಎಷ್ಟು? (ವಿವರ ನೀಡುವುದು)

ಇ) ಕೆಲವು ಬಾರ್‌ಗಳು ಮುಂಜಾನೆ 6.00 ಘಂಟೆಯಿಂದ ತಡರಾತ್ರಿ 12.00 ಘಂಟೆಯವರೆಗೂ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಹೀಗೆ ಇಷ್ಟು ದೀರ್ಘಕಾಲ ಬಾರ್/ಮಧ್ಯದಂಗಡಿ ತೆರೆಯಲು ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ ಸರ್ಕಾರ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ಹಾಗೂ ಇಲಾಖೆಗೆ ಇರುವ ತೊಡಕುಗಳೇನು? (ವಿವರ ನೀಡುವುದು)

ಶ್ರೀ ಎಂ. ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು):–

ಅ) ಬೆಂಗಳೂರು ನಗರ ಜಿಲ್ಲೆಯನ್ನು ಅಬಕಾರಿ ಆಡಳಿತ ದೃಷ್ಟಿಯಿಂದ 48 ವಲಯಗಳಾಗಿ ವಿಂಗಡಿಸಿದೆ. 2011–12ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯಲ್ಲಿರುವ 837 ಮದ್ಯದಂಗಡಿ ಹಾಗೂ 1330 ಬಾರ್‌ಗಳ ವಲಯವಾರು ವಿವರಗಳನ್ನು **ಅನುಬಂಧ–'ಅ'** ನಂತೆ ಲಗತ್ತಿಸಿದೆ. ವಾರ್ಡ್‌ವಾರು ಸನ್ನದು ವಿವರಗಳನ್ನು ಇಲಾಖೆ ಕ್ರೋಢೀಕರಿಸಿರುವುದಿಲ್ಲ.

ಆ) ಇವುಗಳಲ್ಲಿ ಎಲ್ಲಾ ಮದ್ಯದಂಗಡಿ ಬಾರ್‌ಗಳು ಅಧಿಕೃತವಾಗಿರುತ್ತವೆ. ಯಾವುದೇ ಅನಧಿಕೃತ ಮದ್ಯದಂಗಡಿ/ಬಾರ್ ಕಾರ್ಯನಿರ್ವಹಿಸುತ್ತಿಲ್ಲ.

ಇ) ಇಲಾಖೆಯ ಗಮನಕ್ಕೆ ಬಂದಿರುತ್ತದೆ

ಈ) ಅಬಕಾರಿ ವರ್ಷ 2011–12 ರಲ್ಲಿ ಅಂದರೆ, ಜುಲೈ–2011 ರಿಂದ ಅಕ್ಟೋಬರ್ 2011 ರ ಅವಧಿಯಲ್ಲಿ ಸನ್ನದು ವ್ಯವಹಾರದಲ್ಲಿನ ವೇಳೆಯಲ್ಲಿನ ಅವಧಿಗಿಂತ ಮೊದಲು ಅಥವಾ ಅವಧಿಯನ್ನು ಮೀರಿ ತೆರೆದಿದ್ದ ಬಾರ್ ಮತ್ತು ಮದ್ಯದಂಗಡಿಗಳ ವಿರುದ್ಧ ಅಬಕಾರಿ ಕಾನೂನಿನನ್ವಯ, 182 ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಿಗೆ ನೀಡಿರುವ ಅನುದಾನ

116 (367) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್):– ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಎಷ್ಟು? (ವಿವರ ನೀಡುವುದು);

ಆ) 2011–12ನೇ ಸಾಲಿನಲ್ಲಿ ಸರ್ಕಾರವು ಮೀಸಲಿಟ್ಟಿರುವ ಅನುದಾನ ಎಷ್ಟು;

ಇ) ಈ ಸಾಲಿನಲ್ಲಿ ಈವರೆವಿಗೂ ವೆಚ್ಚ ಮಾಡಿರುವ ಹಣ ಎಷ್ಟು; ಉಳಿಕೆಯಿರುವ ಹಣ ಎಷ್ಟು? (ವಿವರ ನೀಡುವುದು);

ಈ) ಮುಜರಾಯಿ ಇಲಾಖೆಗೆ ಸೇರ್ಪಡೆಯಾಗದೇ ಇರುವ ದೇವಸ್ಥಾನಗಳಿಗೆ ಅವರಿಂದ ಪ್ರಸ್ತಾವನೆ ಬಂದ ಸಂದರ್ಭದಲ್ಲಿ ಸರ್ಕಾರವು ನೀಡುತ್ತಿರುವ ಸೌಲಭ್ಯ ಮತ್ತು ಅನುದಾನ ಎಷ್ಟು (ವಿವರ ನೀಡುವುದು)?